# ಕಿಲುಬು

## ಮನೋಜ್ಞ ಕಾದಂಬರಿ

'ಕಿಲುಬು' ವಸುಮತಿ ಉಡುಪ ಅವರ ಧಾರಾವಾಹಿ 14 ಕಂತುಗಳಲ್ಲಿ ಮೂಡಿಬಂದಿದ್ದು ಅತ್ಯಂತ ಮನೋಜ್ಞವಾಗಿತ್ತು. ಹಳ್ಳಿಯ ಸಾಂಸಾರಿಕ ಚಿತ್ರಣ, ವ್ಯವಹಾರ, ಲೋಕರೂಢಿ ಎಲ್ಲಾ ಲೇಖಕಿ ಮನಮುಟ್ಟುವಂತೆ ಚಿತ್ರಿಸಿದ್ದಾರೆ. ನಾಗಶ್ರೀ ರಾಮಚಂದ್ರ ಎರಡು ಹೆಸರುಗಳು ಅಂಕಿತನಾಮ ಮಾತ್ರವಲ್ಲ, ಅನ್ವರ್ಥಕವೂ ಆಗಿರುವುದು ವಿಶೇಷ. ಕಾರಣ ನಾಗಶ್ರೀ ಹಗೆ ಸಾಧಿಸಿದರೆ, ರಾಮಚಂದ್ರ ಶ್ರೀರಾಮಚಂದ್ರನ ಆದರ್ಶ, ತಾಳ್ಮೆ, ಮೃದುಭಾಷಿತ್ವದ ಗುಣ ತೋರುವುದು ಕಾಣುತ್ತದೆ. ಹೆಣ್ಣಿಗೆ ಹಠ, ಕೇಡು, 'ಸಂಶಯಾತ್ಮ ವಿನಶ್ಯತಿ'! ಎಂಬ ಉಕ್ತಿಯಂತೆ, ತನ್ನ ಹಠ ಹಾಗೂ ಸಂಶಯ ಬುದ್ಧಿಯಿಂದಾಗಿ ಯೌವ್ವನದ ಅಮೂಲ್ಯ ಜೀವವನನ್ನು ನಾಗಶ್ರೀ ಹಾಳು ಮಾಡಿಕೊಂಡಂತಾಯ್ತು. ಧಾರಾವಾಹಿ ಸುಖಾಂತ್ಯವಾಗಿದ್ದು ಸಂತೋಷ.

—ವಿ. ಮಾಧವ ಶ್ಯಾನುಭಾಗ ಕುಂದಾಪುರ, ಎಸ್.ವಿಜಯಕುಮಾರಿ ಭಾರತಿ ಸುಧೀಂದ್ರ ಬೆಂಗಳೂರು, ಬಿ.ಎಸ್. ಹೇಮಾಜಿರಾವ್ ತುಮಕೂರು, ಕೇಶವಮೂರ್ತಿ ಬೆಂಗಳೂರು, ಕೊಹಿಮ ಬಸರಕೋಡು, ಕೋಟೇಶ್ವರ ಸೂರ್ಯನಾರಾಯಣರಾವ್ ಬೆಂಗಳೂರು, ಟಿ.ವಿ. ರಘೋತ್ತಮ ಮೈಸೂರು

### ಇನ್ನೂ ಇಂಥ ಧಾರಾವಾಹಿಗಳು ಬರಲಿ

ನಮ್ಮಂತಹ ಅನೇಕರ ಕುಟುಂಬ ವಿಪ್ಲವಗಳ ಯಥಾರ್ಥ ಚಿತ್ರಣ ಕಾದಂಬರಿಯಲ್ಲಿತ್ತು. ನಾಗಶ್ರೀಯ ವೈಯಾರಕ್ಕೆ ಶರಣಾಗದ ರಾಮಚಂದ್ರನ ಸಾಂದರ್ಭಿಕ ಸ್ವಂತಿಕೆ ಮತ್ತು ಸ್ವಾಭಿಮಾನಿಗಳ ತುಮುಲ ಅನೇಕರಿಗೆ ಹಳೆಯ ನೆನಪುಗಳು ಮೆಲುಕು ಹಾಕಿಸಿತು. ವಿಷದವಾದ ನಿರೂಪಣೆ ದಟ್ಟ ಜೀವನಾನುಭವವುಳ್ಳ ಲೇಖಕ (ಕಿ)ರಿಂದ ಮಾತ್ರ ಸಾಧ್ಯ. ಅವರಿಂದ ಇನ್ನೂ ಧಾರಾವಾಹಿಗಳು ಹೊರಬರಲಿ.

—ತಮ್ಮ ವಿಶ್ವಾಸಿ ಓದುಗ

### ಆರಂಭದಿಂದಲೂ ಕುತೂಹಲ

ಧಾರಾವಾಹಿ ಪ್ರಾರಂಭದಿಂದಲೂ ಕುತೂಹಲದಿಂದ ಓದಿಸಿಕೊಂಡು ಹೋಯ್ತು. ನಿಸರ್ಗದ ವರ್ಣನೆ. ಹಿರಿಯ ಮಗ ರಘುನಾಥ ಬಸ್ಸಿನ ಚಕ್ರಕ್ಕೆ ಸಿಕ್ಕು ಅಕಾಲಿಕವಾಗಿ ಸತ್ತ ನಂತರ ಮಗನನ್ನು ಕಳೆದುಕೊಂಡ ರಾಧಮ್ಮನ ಮನಸ್ಸಿನ ತಳಮಳ, ಎಳೆಮಗುವನ್ನು ತಾಯಿ ಗಂಡನ ಸಾವಿನಿಂದಾಗಿ ಪಡುವ ಕಳವಳ, ಸ್ಥಿತಿ ನಂತರ ಮನೆಯ ಏಕೈಕ ಪುತ್ರಿ ನಾಗಶ್ರೀ ಗಂಡನನ್ನು ತಿರಸ್ಕರಿಸಿದ ನಂತರ ಪತಿ ರಾಮಚಂದ್ರನ ಮನಸ್ಸಿನಲ್ಲುಂಟಾದ ತಳಮಳವನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಆ ಪ್ರದೇಶದ ಭಾಷೆ, ಜರಣಿ ಬಿಡುಸ್ಸೀನಿ, ಜಗ್ಗು, ಮುಂಚೇಕಡಿ, ತಲೆಬಿಳಿಚಲ್ಪಡು, ಕೈಕಾಲೆಲ್ಲಾ ಸಾಬೇಕಾಗಿದೆ, ತಾನ–ಕುದಗಳನ್ನು ಓದುರಿಗೆ ಪರಿಚಯಿಸಿದ್ದಾರೆ.

—ಕೆ.ಎಸ್. ಪ್ರಭಾಕರಗುಪ್ತ, ಹಾಸನ

### ಖುಷಿ ಕೊಟ್ಟಿತು

ಕಾದಂಬರಿ ಸುಲಲಿತವಾಗಿ ಓದಿಸಿಕೊಂಡು ಹೋಯಿತು. ಸಂದರ್ಭಕ್ಕೆ ತಕ್ಕಂತೆ ರಘುಪತಿ ಶೃಂಗೇರಿ ಅವರ ಚಿತ್ರಗಳು ತುಂಬ ಚೆನ್ನಾಗಿ ಮೂಡಿ ಬಂದಿತ್ತು.

—ಮು.ಸ.ನಾಯಕ ಬೆಂಗಳೂರು

### ರೋಚಕ ಅಂತ್ಯ

ಪ್ರತಿಯೊಂದು ಸನ್ನಿವೇಶಗಳ ಚಿತ್ರಣದಲ್ಲಿ ಭಾವತೀವ್ರತೆಯನ್ನು ತುಳುಕಿಸುತ್ತ, ಓದಿನೊಂದಿಗೆ ಕಥೆಯೊಳಗಿನ ಪಾತ್ರಗಳೇ ನಾವಾಗುತ್ತ ನೀಡಿದ ಅನುಭವ ಮನೋಜ್ಞವಾಗಿದೆ. ಕಥಾಶೈಲಿ ಪರಿಸರದ ಸೊಗಡಿನಿಂದ ಕೂಡಿದೆ. ಕಾದಂಬರಿ ವಸ್ತು, ಭಾಷೆ, ನಿರೂಪಣೆ, ಶೈಲಿಯ ದೃಷ್ಟಿಯಿಂದ ನೆನಪಿನಲ್ಲಿ ಉಳಿಯುವಂತಿದೆ.

—ಧರ್ಮಾನಂದ ಶಿರ್ವ, ಬೆಂಗಳೂರು

### ಕುಟುಂಬದ ಒಳಸುಳಿ

ಮಲೆನಾಡು ಭಾಗದ ಒಂದು ಸರ್ವ ಸಾಧಾರಣ ಕುಟುಂಬದ ಒಳಸುಳಿಗಳನ್ನು ಒಳಗೊಂಡು ರಚಿತವಾದ ಧಾರಾವಾಹಿ ಇದು. ಕೌಟುಂಬಿಕ ನೆಲೆಗಟ್ಟಿನಲ್ಲಿ ಚಿತ್ರಿಸಲ್ಪಟ್ಟ ನವದಂಪತಿಗಳ ಶೃಂಗಾರ ಎಲ್ಲಿಯೂ ಮಿತಿ ಮೀರದೆ ಹಿತವಾಗಿ ಓದಿಸಿಕೊಂಡು ಹೋಗುವಂತಿದೆ. ಬಡವರ ಮನೆಯಲ್ಲಿ ಹುಟ್ಟಿದ ಕಾರಣಕ್ಕೆ ತನ್ನದೇ ಕೀಳರಿಮೆಯಿಂದ ತಗ್ಗಿಬಗ್ಗಿ ನಡೆಯುತ್ತಿದ್ದ ಹಿರಿಸೊಸೆ ಭವಾನಿಯ ಶಾಂತ ಗುಣಕ್ಕೆ ಇಲ್ಲದ ಬೆಲೆ, ಒಬ್ಬ ಸೊಸೆಯಾದರೂ ಇದ್ದುಳ್ಳವರ ಮನೆಯಿಂದ ಬರಲಿ ಎಂಬ ಅತ್ತೆಯ ಆಸೆಗೆ ಉತ್ತರವಾಗಿ ಮನೆ ಸೇರಿದ ನಾಗಶ್ರೀಯ ದುರಹಂಕಾರ, ಸಮಾಧಾನಿ, ನಿಧಾನಿಯಾದರೂ, ಸ್ವಾಭಿಮಾನಿಯಾದ ರಾಮಚಂದ್ರನ ಕುಟುಂಬ ಜೀವನ ಬಲಿ ತೆಗೆದು ಕೊಂಡು ಅವನು ತಾಯಿಯ ಸೇವೆಗೆ ಮೀಸಲಾದ ಬಗೆ, ಒಟ್ಟಿನಲ್ಲಿ ಬೇಸರ ಬರಿಸದೆ ಸಹಜವಾಗಿ ಮೂಡಿಬಂತು. ಧಾರಾವಾಹಿ ಸುಖಾಂತ್ಯವಾದದ್ದು ಸಂತೋಷಪಡುವಂತಾಯ್ತು.

—ಜಿ.ವಿ. ಸರಸ್ವತಿ, ಶಿವಮೊಗ್ಗ

### ಟೀವಿ ಧಾರಾವಾಹಿಯಾಗಲು ಯೋಗ್ಯ

ಸೊಗಸಾದ ಈ ಧಾರಾವಾಹಿಯನ್ನು ಓದುತ್ತಿರುವಾಗ ದಿ. ಎಂ.ಕೆ. ಇಂದಿರಾರವರ ಕೆಲವು ಕಾದಂಬರಿಯಂತೆಯೇ ಭಾಸವಾಯಿತು. ಬಿಗಿಯಾದ ಆದರೆ ಸುಂದರವಾದ ಸುಲಲಿತ ಬರವಣಿಗೆ ಮತ್ತು ಕಡೆಯ ಕಂತಿನಲ್ಲಿ ಒಂದು ರೀತಿಯ ರೋಚಕತೆ ಮೆಚ್ಚುಗೆಯ ಅಂಶ. ಇದು ಟೀವಿ. ಧಾರಾವಾಹಿಯಾಗಲು ಯೋಗ್ಯವಾಗಿದೆ. 14 ಕಂತಿನ ಧಾರಾವಾಹಿ ಅಷ್ಟೇ ಕಂತಿನಲ್ಲಿ ಪ್ರಬುದ್ಧ ನಿರ್ದೇಶಕರು ತೆರೆಗೆ ತರಬಹುದು.

— ಚಂದ್ರಶೇಖರ್, ಮೈಸೂರು

### ಬೇಗನೆ ಮುಗಿಯಿತು

ಧಾರಾವಾಹಿ ಬಹಳ ಸೊಗಸಾಗಿ ಮೂಡಿಬಂದಿದೆ. ಇಷ್ಟು ಬೇಗನೆ ಮುಗಿಯುತ್ತೆ ಅಂದುಕೊಂಡಿರಲಿಲ್ಲ. ಈ ರೀತಿಯ ಧಾರಾವಾಹಿಗಳು ಇನ್ನೂ ಹೆಚ್ಚು ಪ್ರಕಟವಾಗಲಿ. ಲೇಖಕಿಗೆ ಅಭಿನಂದನೆಗಳು.

— ಎಲ್. ಶ್ರೀನಿವಾಸಯ್ಯ ಬೆಂಗಳೂರು

### ಪಕ್ವವಾದ ಕಾದಂಬರಿ

14 ಕಂತುಗಳಲ್ಲಿ ಹರಿದು ಬಂದ ಧಾರಾವಾಹಿ ಆದಿಯಿಂದ ಅಂತ್ಯದವರೆಗೂ ಕುತೂಹಲವನ್ನು ಕೆರಳಿಸಿತು. ಗ್ರಾಮೀಣ ಜೀವನದ ಸೊಗಡು, ಬದುಕಿನ ನಿತ್ಯ ಸತ್ಯಗಳು, ಒಳಹುವಿನ ಹರಿವಿನ ಪರಿಧಿಯಲ್ಲಿ ಪಕ್ವವಾಗಿ ಮೂಡಿಬಂದಿದೆ.

—ಪೂರ್ಣಿಮಾ ಮೂರ್ತಿ ಬೆಂಗಳೂರು

### ರಸಪೂರ್ಣ; ಕೊನೆಗೊಂದು ಕಪ್ಪುಚುಕ್ಕೆ

ಕಾದಂಬರಿ ಸೊಗಸಾಗಿತ್ತು. ವಸುಮತಿ ಉಡುಪ ಅವರ ಸರಳ ಸುಂದರ ಭಾಷೆಯಲ್ಲಿ ಜೀವನಾನುಭವದ ಪಕ್ವತೆ ಅಲ್ಲಲ್ಲೇ ಸುಳಿಯುತ್ತಾ ಧಾರಾವಾಹಿ ರಸಪೂರ್ಣವಾಗಿತ್ತು. ಆದರೆ ಕಾದಂಬರಿಯ ಕಟ್ಟಕಡೆಯಲ್ಲಿ ಕಥಾನಾಯಕ ರಾಮಚಂದ್ರನ ಪೌರುಷದ ಮೆರೆದಾಟ, ಅದಕ್ಕೂ ಮಿಗಿಲಾಗಿ ಮಡದಿಗೆ ಕಪಾಳಮೋಕ್ಷ ಮುಂತಾದ ಕುಸಾಂಪ್ರದಾಯಿಕ ಸಿದ್ಧ ಸೂತ್ರಗಳು ಖಂಡಿತ ಬೇಕಾಗಿರಲಿಲ್ಲ. ರಾಮಚಂದ್ರನ ಸತ್ವ ಸಾಧನೆಗೆ ಇವುಗಳ ಅವಶ್ಯಕತೆಯೂ ಇರಲಿಲ್ಲ. ಇಡೀ ಕಾದಂಬರಿಯ ಚೆಲುವಿಗೆ ಈ ಪ್ರಕರಣ ಮಸಿ ಇಟ್ಟಹಾಗೆ! ಕಷ್ಟಗಳಲ್ಲಿ ಪಳಗಿದ ರಾಮಚಂದ್ರ ಸಂಯಮಿಯಾಗಿ ವರ್ತಿಸಿದ್ದಿದ್ದರೆ ಅವನ ವ್ಯಕ್ತಿತ್ವ ಬೆಳಗುತ್ತಿತ್ತು.

—ಭಾರತೀ ಕಾಸರಗೋಡು

### ಅಂತ್ಯ ನಿರಾಸೆ ತಂದಿತು

ಧಾರಾವಾಹಿ 13 ಕಂತುಗಳಲ್ಲಿಯೂ ಕುತೂಹಲ ಕೆರಳಿಸಿ ಓದುವ ಆಸಕ್ತಿ ಹೆಚ್ಚಿಸಿತು. ಓದುತ್ತ ಹೋದಂತೆ ರಾಮಚಂದ್ರನ ಬಗ್ಗೆ ಸಹಾನುಭೂತಿ ಬೆಳೆಯುತ್ತ ಹೋಯಿತು. ಆದರೆ ಕೊನೆಯ 14ನೇ ಕಂತು ಮಾತ್ರ ತೀವ್ರ ನಿರಾಸೆ ಹುಟ್ಟಿಸಿತು. ಅಂತ್ಯವು ಬೇರೆ ಥರವಾಗಿದ್ದರೆ ಪರಿಣಾಮಕಾರಿ ಆಗುತ್ತಿತ್ತು.

—ಸುನಂದಾ ಹಾಲಭಾವಿ ಬೆಳಗಾವಿ

### ಮನರಂಜಿಸದ ಧಾರಾವಾಹಿ

ಕಾದಂಬರಿ ಏಕಾತಾನತೆಯಿಂದ ಕೂಡಿ ಮನರಂಜಿಸಲಿಲ್ಲ. ಮುರಿದು ಬಿದ್ದು ನಂತರ ಒಂದಾದ ದಾಂಪತ್ಯದ ಕಥಾ ಹಂದರದ ವಸ್ತುವಿನ ಧಾರಾವಾಹಿ ಮೆಚ್ಚಿಸಿದ ಅಂಶವೆಂದರೆ, ಮಲೆನಾಡಿನ ಸೊಗಡುಳ್ಳ ಭಾಷೆ.

—ಸುಂದರ್ ಬೆಂಗಳೂರು, ಎಂ.ಮೃತ್ಯುಂಜಯಪ್ಪ ಚಿತ್ರದುರ್ಗ